ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಗ್ರಾಮದಿಂದ ಪೋಲೀಸ್ ಠಾಣೆಯನ್ನು ವರ್ಗಾಯಿಸಿರುವುದರ ಬಗ್ಗೆ

2691 (3434)ಶ್ರೀ ಕೃಷ್ಣಪ್ಪ ಎ. (ದೊಡ್ಡಬಳ್ಳಾಪುರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಗ್ರಾಮದ ಪ್ರದೇಶದಲ್ಲಿದ್ದ ಪೋಲೀಸ್ ಠಾಣೆಯನ್ನು ಹೊಸಹಳ್ಳಿ ಗ್ರಾಮಕ್ಕೆ ವರ್ಗಾಯಿಸಲು ಕಾರಣವೇನು?

ಆ)ಹೊಸಹಳ್ಳಿ ಗ್ರಾಮವು ಗೌರಿಬಿದನೂರು ಅಂಚಿನಲ್ಲಿದ್ದು ಸಾಸಲು ಗ್ರಾಮವು ತಾಲ್ಲೂಕಿನ ಮಧ್ಯಭಾಗದಲ್ಲಿದ್ದು, ಪೋಲೀಸ್ ಠಾಣೆ ವರ್ಗಾಯಿಸಿರುವುದರಿಂದ ಅಲ್ಲಿಯ ಜನರಿಗೆ ತೊಂದರೆಯಾಗುವುದಿಲ್ಲವೇ?

ಇ)ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು) :

ಅ)ಸಾಸಲು ಗ್ರಾಮದಲ್ಲಿ ಹಿಂದಿನಿಂದಲೂಉಪ ಠಾಣೆಯಿದ್ದು ಈಗಲೂ ಸಹ ಉಪ ಠಾಣೆ ಅಲ್ಲಿಯೇ ಕಾರ್ಯನಿರ್ವಹಿಸುತ್ತಿದೆ. ಹೊಸಹಳ್ಳಿ ಗ್ರಾಮಕ್ಕೆ ಹೊಸದಾಗಿ ಪೋಲೀಸ್ ಠಾಣೆಯನ್ನು ಸರ್ಕಾರಿ ಆದೇಶ ಸಂಖ್ಯೆ :ಹೆಚ್ ಡಿ 78 ಪಿಒಪಿ 95 ದಿನಾಂಕ:2-3-96ರಲ್ಲಿ ಮಂಜೂರಾಗಿರುತ್ತದೆ.

ಆ)ಸಾಸಲು ಗ್ರಾಮದಿಂದ ಹೊಸಹಳ್ಳಿ ಗ್ರಾಮಕ್ಕೆ ಪೋಲೀಸ್ ಠಾಣೆಯನ್ನು ವರ್ಗಾಯಿಸಿರುವುದಿಲ್ಲ. ಹೊಸಹಳ್ಳಿಯಲ್ಲಿ ದಿನಾಂಕ:29-1-1997ರಿಂದ ಹೊಸದಾಗಿ ಪೋಲೀಸ್ ಠಾಣೆಯನ್ನು ಪ್ರಾರಂಭಿಸಲಾಗಿದೆ. ಸಾಸಲು ಗ್ರಾಮದಲ್ಲಿ ಪೋಲೀಸ ಹೊರಠಾಣೆಯಿದ್ದು ಅಲ್ಲಿಯ ಜನರಿಗೆ ಯಾವುದೇ ರೀತಿ ತೊಂದರೆಯಾಗಿರುವುದಿಲ್ಲ.

ಇ)ಉದ್ಭವಿಸುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಾರ್ವಜನಿಕರಿಗೆ ವಿತರಿಸಲಾದ ನಿವೇಶನಗಳ ಸಂಖ್ಯೆ

2692 (3200)ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯ ಮಂತ್ರಿಗಳುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಿದೆ;

ಆ)ಮುಂದಿನ ಒಂದು ವರ್ಷದಲ್ಲಿ ಎಷ್ಟುನಿವೇಶನ ವಿತರಿಸಲು ನಿರ್ಧರಿಸಲಾಗಿದೆ;

ಇ)ಈ ರೀತಿ ನಿವೇಶನ ವಿತರಿಸಲು ಸರ್ಕಾರ ಹಮ್ಮಿಕೊಂಡಿರುವ ಕ್ರಮದ ಬಗ್ಗೆ ವಿವರಗಳನ್ನು ನೀಡುವುದು?